ಇಂದು ದಿಃ **03-08-2021** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿಗಳ ಪರ ವಕೀಲರಾದ ಶ್ರೀ ಬಿ. ಎಂ.ಎಸ್ ವಕೀಲರಿಂದಃ**

10 ಬಾವ ಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-33 ರಿಂದ 42 ಎಂದು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 6 ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಎಚ್ ವಕೀಲರಿಂದಃ**

ನನಗೆ ಈಗ 45 ವರ್ಷ ವಯಸ್ಸಾಗಿದೆ. ನಮ್ಮ ಸ್ವಂತ ಊರು ನಂದಿಗಾವಿ ಗ್ರಾಮ. ನಂದಿಗಾವಿ ಗ್ರಾಮ ಮತ್ತು ಹನಗವಾಡಿ ಗ್ರಾಮದ ಮಧ್ಯ 12 ಕಿ.ಮೀ ಅಂತರ ಇದೆ. ಹರಿಹರದಿಂದ ಹನಗವಾಡಿ ಗ್ರಾಮ 5-6 ಕಿ.ಮೀ ದೂರ ಇದೆ. ಹರಿಹರದಲ್ಲಿ ಸಾಕಷ್ಟು ಫೋಟೋ ಸ್ಟುಡಿಯೋಗಳಿವೆ ಎಂದರೆ ಸರಿ. ವಾದಿ ಪ್ರತಿವಾದಿಯರ ತಂದೆ, ಚಿಕ್ಕಪ್ಪಂದಿರ ಪರಿಚಯಸ್ತರು ಎಂದು ಬರೆಯಿಸಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯ ಹೆಸರು ಹುಲಿಗೆಪ್ಪ. ಹುಲಿಗೆಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಹುಲಿಗೆಪ್ಪನನ್ನು ನೋಡಿದ್ದೇನೆ. ಹುಲಿಗೆಪ್ಪನಿಗೆ 5 ಜನ ಅಣ್ಣ ತಮ್ಮಂದಿರು. 1.ಬಸಪ್ಪ, 2.ಮುರಿಗೆಪ್ಪ, 3.ಮಲ್ಲೇಶಪ್ಪ, 4.ಕೆಂಚಪ್ಪ ಮತ್ತು 5.ನಾಗಪ್ಪ. ನಾನು 5 ಜನರನ್ನು ನೋಡಿದ್ದೇನೆ. ನಾಗಪ್ಪ ಎನ್ನುವವರು ಮೃತಪಟ್ಟಿದ್ದಾರೆ. ಉಳಿದ 4 ಜನರು ಜೀವಂತ ಇದ್ದಾರೆ. ಹುಲಿಗೆಪ್ಪನ ಸಹೋದರ ಕೆಂಚಪ್ಪ ಎನ್ನುವವರು ಇರುವುದಿಲ್ಲ, ಸಾಕ್ಷಿಯು ಪುನಃ ಹೇಳುತ್ತಾರೆ ಪಂಚಪ್ಪ ಎನ್ನುವವರು ಇರುತ್ತಾರೆ. ಸಾಕ್ಷಿಯು ಪುನಃ ಹೇಳುತ್ತಾರೆ ಮಲ್ಲೇಶಪ್ಪ ಎನ್ನುವವರು ಮೃತಪಟ್ಟಿರುತ್ತಾರೆ. ಪಂಚಪ್ಪ ಮತ್ತು ಬಸಪ್ಪ ಎನ್ನುವವರು ಜೀವಂತವಾಗಿದ್ದಾರೆ. ಉಳಿದ 3 ಜನ ಮೃತಪಟ್ಟಿದ್ದಾರೆ. ಬಸಪ್ಪ ಮತ್ತು 4 ಜನ ಸಹೋದರರು ಅವರ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡ ಬಗ್ಗೆ ನಾನು ನೋಡಿರುವುದಿಲ್ಲ. 5 ಜನ ಸಹೋದರರು ನನಗೆ ಪರಿಚಯವಾದಗಿನಿಂದಲೂ ಬೇರೆ ಬೇರೆ ವಾಸವಾಗಿದ್ದರು. 5 ಜನರು ಯಾವ ಯಾವ ಜಮೀನುಗಳನ್ನು ಮತ್ತು ಆಸ್ತಿಗಳನ್ನು ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ಮುರಿಗೆಪ್ಪನ ಹೆಸರಿನಲ್ಲಿ ಜಮೀನು ಮತ್ತು ಮನೆ ಇದ್ದು, ಅವುಗಳ ನಂಬರ್ ಗಳು ಗೊತ್ತಿಲ್ಲ. ಮುರಿಗೆಪ್ಪನಿಗೆ 3 ವರೆ 4 ಎಕರೆ ಜಮೀನು ಇದ್ದು, ಅದರಲ್ಲಿ 1 ವರೆ ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ. ಈ ದಾವೆಯನ್ನು ಗಂಗಾಧರ ಎನ್ನುವವರು ಅವರ ಸಹೋದರ ಕೆಂಚಪ್ಪನ ವಿರುದ್ಧ ದಾವಾ ಸಲ್ಲಿಸಿದ್ದಾರೆ. ಬೇರೆ ಯಾರ ವಿರುದ್ದವೂ ದಾವಾ ಸಲ್ಲಿಸಿರುವುದಿಲ್ಲ. ವಾದಿಯು ಕೋಡಿಹಳ್ಳಿ ಗ್ರಾಮದ ಜಮೀನುಗಳು ಮತ್ತು ಹನಗವಾಡಿ ಗ್ರಾಮದ ಜಮೀನುಗಳ ಕುರಿತು ದಾವಾ ಸಲ್ಲಿಸಿದ್ದಾನೆ. ಎರಡು ಜಮೀನುಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಇರುವುದಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ಮನೆ, ಕಣ, ನಿವೇಶನ ಇರುತ್ತವೆ. ಮನೆ, ಕಣ, ನಿವೇಶನ ಕುರಿತು ವಾದಿ ದಾವಾ ಸಲ್ಲಿಸಿದ್ದಾನೆ. ದಾವಾ ಆಸ್ತಿಗಳ ಸರ್ವೆ ನಂಬರ್ ಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಯಾವ ಯಾವ ಆಸ್ತಿಗಳು ಎಷ್ಟು ವಿಸ್ತೀರ್ಣ ಇವೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಚಕ್ ಬಂದಿ ನನಗೆ ಗೊತ್ತಿಲ್ಲ. ನಮ್ಮ ಮನೆ ಚಕ್ ಬಂದಿ ಹೇಳಲು ಬರುತ್ತದೆ.

ನಾನು ನನ್ನ ಮುಖ್ಯ ವಿಚಾರಣೆಯ ಕಂಡಿಕೆ 2 ರ 1995 ರಲ್ಲಿ ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಬೀಡಾ ಅಂಗಡಿ ಇಟ್ಟುಕೊಂಡಿದ್ದೆ ಎಂದು ಯಾವುದೇ ದಾಖಲೆಗಳಿರುವುದಿಲ್ಲ. ನಾಗಪ್ಪ ಎನ್ನುವವರ ಜಾಗದಲ್ಲಿ ಬೀಡಾ ಅಂಗಡಿ ಇಟ್ಟುಕೊಂಡಿದ್ದೆ. ನಾನು ಜೈ ಕರ್ನಾಟಕ ಹೋಟೆಲ್ ಮಾಲೀಕರ ಜೊತೆಗೆ ಸಂಬಂಧ ಹೊಂದಿದ್ದು ಅವರಿಗೆ ಬಾಡಿಗೆ ಕೊಡುತ್ತಿದ್ದೆನು. ಅದರ ಮಾಲೀಕರ ಹೆಸರು ಮಾರುತಿ. ಈಗ ಜೈ ಕರ್ನಾಟಕ ಹೋಟೆಲ್ ಇರುವುದಿಲ್ಲ ಮತ್ತು ಅದರ ಮಾಲೀಕರಾದ ಮಾರುತಿ ಎನ್ನುವವರು ಮೃತರಾಗಿದ್ದಾರೆ. ನಾನು ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಯಿಸಿರುವುದಿಲ್ಲ. ಜೈ ಕರ್ನಾಟಕ ಹೋಟೆಲ್ ಮಾಲೀಕರಿಗೆ ಬಾಡಿಗೆ ಕೊಟ್ಟ ಬಗ್ಗೆ ಯಾವುದೇ ರಸೀದಿಗಳು ಇರುವುದಿಲ್ಲ. ನಾನು ಬೀಡಾ ಅಂಗಡಿ ಇಟ್ಟುಕೊಂಡ ಬಗ್ಗೆ ಜನ ನನ್ನನ್ನು ನೋಡಿದ್ದಾರೆ. ಈಗ ನಾನು ಬೀಡಾ ಅಂಗಡಿ ನಡೆಸುವುದಿಲ್ಲ ಫೋಟೋಗ್ರಾಫರ್ ಆಗಿದ್ದೇನೆ. ನಾನು ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಬೀಡಾ ಅಂಗಡಿ ಇಟ್ಟುಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜೈ ಕರ್ನಾಟಕ ಹೋಟೆಲ್ ಜಾಗದಲ್ಲಿ ಬೀಡಾ ಅಂಗಡಿ ಇಟ್ಟುಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫೋಟೋಗ್ರಾಫರ್ ಆದ ಬಗ್ಗೆ ಸರ್ಕಾರದಿಂದ ಅನುಮತಿ ಪಡೆದಿರುವುದಿಲ್ಲ, ಆದರೆ ಗ್ರಾಮ ಪಂಚಾಯ್ತಿಯಿಂದ ಪರಾವನಿಗೆ ಪಡೆದಿರುತ್ತೇನೆ. 2001-02 ರಲ್ಲಿ ಫೋಟೋ ಸ್ಟುಡಿಯೋ ಮಾಡಲು ನಂದಿಗಾವಿ ಪಂಚಾಯ್ತಿಯಿಂದ ಪರಾವನಿಗೆ ಪಡೆದಿದ್ದೇನೆ. ಪರಾವನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಪಂಚಾಯ್ತಿಯಿಂದ ಪರಾವನಿಗೆಯನ್ನು ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕ್ಯಾಮರ ಖರೀದಿಸಿದ್ದ ಬಗ್ಗೆ ನನ್ನ ಹತ್ತಿರ ರಸೀದಿ ಇರುವುದಿಲ್ಲ. ನಾನು ಫೋಟೋಗ್ರಾಫರ್ ಆಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುರಿಗೆಪ್ಪನಿಗೆ 6 ಜನ ಮಕ್ಕಳಿದ್ದಾರೆ. 1.ಕೆಂಚಪ್ಪ, 2.ಮಹದೇವಕ್ಕ, 3.ಗಂಗಾಧರ, 4.ರುದ್ರಮ್ಮ, 5.ರೇಣುಕಾ ಮತ್ತು 6.ಬಸಮ್ಮ. ಬಸಮ್ಮ ಎನ್ನುವವರನ್ನು ದಾವಣಗೆರೆ ತಾಲೂಕು ಕಡ್ಲೆ ಬಾಳು ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ಮುರಿಗೆಪ್ಪ ಎನ್ನುವವರಿಗೆ ಬಸಮ್ಮ ಎನ್ನುವ ಮಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಆಕೆಗೆ ಮೂಲ ಹೆಸರು ಯಶೋದಮ್ಮ ಎಂದು ಇರುತ್ತದೆ ಎಂದು ಹೇಳುತ್ತಾರೆ. ಈ ದಾವೆಯ 3 ಮತ್ತು 4 ನೇ ಪ್ರತಿವಾದಿಯ ಹೆಸರು ಉಮೇಶ ಮತ್ತು ಜಗದೀಶ. ಮುರಿಗೆಪ್ಪ 6-7 ವರ್ಷಗಳ ಹಿಂದೆ ಮೃತಪಟ್ಟಿದ್ದಾನೆ. ಮುರಿಗೆಪ್ಪನ ಹೆಂಡತಿಯ ಹೆಸರು ಸೀತಮ್ಮ. ಸೀತಮ್ಮ 4-5 ವರ್ಷಗಳ ಹಿಂದೆ ಮೃತಪಟ್ಟಿದ್ದಾಳೆ.

ನಾನು ಫೋಟೋಗ್ರಾಫರ್ ಆಗಿ ಎಷ್ಟು ಜನರ ಫೋಟೋಗಳನ್ನು ತೆಗೆದಿದ್ದೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಫೋಟೋಗ್ರಾಫರ್ ಆಗಿ ಹೋದಾಗ ಫೋಟೋ ತೆಗೆದು ಅವುಗಳ ಚಿತ್ರ ಹಾಕಿ ಅವರಿಗೆ ತಲುಪಿಸುವುದು ಮಾತ್ರ ಕೆಲಸ ಎನ್ನುವುದು ಸರಿ. ಪರಿಚಯಸ್ತರ ಕುಟುಂಬದ ವಿಚಾರಗಳನ್ನು ಮಾತ್ರ ಚರ್ಚೆ ಮಾಡುತ್ತೇನೆ. ನನಗೆ ಫೋಟೋ ತೆಗೆದ ಎಲ್ಲಾ ಮನೆಗಳ ಮತ್ತು ಕುಟುಂಬದ ಆಸ್ತಿಗಳ ವಿಚಾರವನ್ನು ಹೇಳಲು ಆಗುವುದಿಲ್ಲ. ಪರಿಚಯಸ್ತರ ಮತ್ತು ಆತ್ಮೀಯ ಕುಟುಂಬದ ಬಗ್ಗೆ ಮಾತ್ರ ನಾನು ಹೇಳ ಬಹುದು. ವಾದಿ ನನಗೆ ಆತ್ಮೀಯರಾಗಿದ್ದಾರೆ ಎಂದು ಹೇಳಿ ಬರಿಸಿಲ್ಲ ಎಂದರೆ ಸರಿ. ಅವರ ಕುಟುಂಬದವರೆಲ್ಲಾ ಆತ್ಮೀಯರು. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರಮ್ಮ ಮತ್ತು ರೇಣುಕಮ್ಮ ಎನ್ನುವವರ ಮದುವೆ ಸಿರಿಗೆರೆ ಮಠದಲ್ಲಿ ಆಗಿದ್ದು ಯಾವ ದಿನಾಂಕದಂದು ಮದುವೆ ಆಗಿದೆ ಎಂದು ನನಗೆ ನೆನಪಿಲ್ಲ 1999 ರಲ್ಲಿ ಮದುವೆ

ಆಗಿದೆ. ನನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕವನ್ನು ಹೇಳಿ ಬರೆಸಿದ ಬಗ್ಗೆ ನನಗೆ ನೆನಪಿಲ್ಲ. ದಿನಾಂಕ:28-06-1999 ರಲ್ಲಿ ರುದ್ರಮ್ಮ ಮತ್ತು ರೇಣುಕಾ ಎನ್ನುವವರ ಮದುವೆ ಕಾರ್ಯಕ್ರಮದಲ್ಲಿ ಫೋಟೋಗ್ರಾಫರ್ ಆಗಿ ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ರಾಮಪ್ಪ ಮತ್ತು ಮಂಜಪ್ಪ ಎನ್ನುವವರ ಅಂಗಡಿಗೆ ವೀಳ್ಯಾದೆಲೆಯನ್ನು ಪೂರೈಯಿಸುತ್ತಿದ್ದರು. ರಾಮಪ್ಪ ಮತ್ತು ಮಂಜಪ್ಪ ಈಗ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. 1995 ರಲ್ಲಿ ನಾನು ಬೀಡಾ ಅಂಗಡಿ ನಡೆಸುತ್ತಿದ್ದಾಗ ವಾದಿ ವೀಳ್ಯಾದಲೆ ತಂದು ಹಾಕುತ್ತಿದ್ದರು ಕೆಂಚಣ್ಣ ಎನ್ನುವವರು ಬಂದು ಮಾರಾಟ ಮಾಡುತ್ತಿದ್ದರು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಎಲ್ಲಾ ಕಾರ್ಯಕ್ರಮಗಳ ಫೋಟೋಗ್ರಾಫಿಯನ್ನು ಮಾಡಿದ್ದೀಯ ಎಂದರೆ ಸಾಕ್ಷಿ ಅವರು ಪರಿಚಯ ಆದ ನಂತರ ಮಾಡಿದ್ದೇನೆ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಫೋಟೋದ ಹಣ ಪಾವತಿಸಿದ ಬಗ್ಗೆ ನಾನು ರಸೀದಿ ಇಟ್ಟುಕೊಂಡಿಲ್ಲ. ನಾನು ಫೋಟೋ ತೆಗಿಸಿಕೊಂಡವರಿಗೆ ರಸೀದಿಯನ್ನು ಇತ್ತೀಚಗೆ ಕೊಡುತ್ತಿದ್ದೇನೆ ಮೊದಲು ಕೊಡುತ್ತಿರಲಿಲ್ಲ. 10-12 ವರ್ಷಗಳಿಂದ ಬಿಲ್ ಗಳನ್ನು ಕೊಡುತ್ತಿದ್ದೇನೆ. 20-30 ವರ್ಷಗಳ ಹಿಂದಿನಿಂದಲೂ ಬಿಲ್ ಗಳನ್ನು ಕೊಡುತ್ತಿದ್ದರು ಎಂದರೆ ಸರಿ. ನಾನು ಆ ಕಾಲದಲ್ಲಿ ಫೋಟೋ ಸ್ಟುಡಿಯೋ ಇಟ್ಟುಕೊಂಡಿರಲಿಲ್ಲ ಆದ್ದರಿಂದ ಬಿಲ್ ಗಳನ್ನು ಕೊಡುತ್ತಿರಲಿಲ್ಲ. 1 ನೇ ಪ್ರತಿವಾದಿ ಫೋಟೋಕ್ಕೆ ಹಣ ಸಂದಾಯ ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಾಟಕದಲ್ಲಿ ಪಾತ್ರದಾರಿಯಾಗಿ 1 ನೇ ಪ್ರತಿವಾದಿ ಕಥಾ ಸಂಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಾಟಕದ ಬಾವ ಚಿತ್ರಗಳನ್ನು ತೆಗೆದಿಕಕ್ಕೆ ಹಣ ಪಾವತಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಪ್ರತಿವಾದಿಯರ ಕುಟುಂಬವನ್ನು ಪ್ರತ್ಯಕ್ಷವಾಗಿ ಕಂಡು ತಿಳಿದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸಿ ಆಸ್ತಿಗಳು ಮನೆಗಳಿರಬಹುದು. ದಾವಾ ಷೆಡ್ಯೂಲ್ ಎ ಆಸ್ತಿಗಳು ಜಮೀನುಗಳಿರುತ್ತವೆ. ದಾವಾ ಬಿ ಷೆಡ್ಯೂಲ್ ಆಸ್ತಿಗಳು ಜಮೀನುಗಳಿರತ್ತವೆ. 1 ಎಕರೆ 30 ಗುಂಟಾ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸಿ ಷೆಡ್ಯೂಲ್ ಆಸ್ತಿಯ ಖಾತಾ ನಂಬರ್ ಮತ್ತು ಸೈಟ್ ನಂಬರ್ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಗಳ ಸರ್ವೆ ನಂಬರ್, ಖಾತಾ ನಂಬರ್, ಸೈಟ್ ನಂಬರ್ ಗಳನ್ನು ಹೇಳಿ ಬರೆಯಿಸಿರುವುದಿಲ್ಲ. ಕೋಡಿಹಳ್ಳಿ ಗ್ರಾಮದ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ ಆದರೆ ಅದು ಖರೀದಿಸಿದ ಜಮೀನು. ಯಾವ ವರ್ಷ, ಯಾರಿಂದ ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಕೂಡಿದ್ದಾಗ ಖರೀದಿಸಿದ್ದಾರೆ ಎಂದು ಸ್ವ ಇಚ್ಛೆಯಿಂದ ಹೇಳುತ್ತಾರೆ. ಸದರಿ ಜಮೀನನ್ನು ಖರೀದಿಸಿದಾಗ ನಾನು ಹಾಜರು ಇರಲಿಲ್ಲ, ಆದರೆ ನನ್ನನ್ನು ಕರೆದುಕೊಂಡು ಹೋಗಿ ನಾವು ಖರೀದಿಸಿದ್ದೇವೆ ಎಂದು ನನಗೆ ತೋರಿಸಿದ್ದಾರೆ ಎಂದು ಸ್ವ ಇಚ್ಛೆಯಿಂದ ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿ ಷೆಡ್ಯೂಲ್ ನಲ್ಲಿ ತೋರಿಸಿದ ಆಸ್ತಿಗಳು ಯಾವವು ಎಂದು ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿಗೆ ಸರ್ಕಾರದಿಂದ ಹನಗವಾಡಿ ಗ್ರಾಮದಲ್ಲಿ ನಿವೇಶನ ಕೊಟ್ಟಿದ್ದಾರೆ ಎಂದು ನನಗೆ ಹೇಳಿದ್ದಾರೆ. 1 ನೇ ಪ್ರತಿವಾದಿ ಆ ನೀವೇಶನದಲ್ಲಿ ಮನೆ ಕಟ್ಟಿಕೊಂಡು ಆತನ ಹೆಂಡತಿ ಮಕ್ಕಳೊಂದಿಗೆ ವಾಸವಾಗಿದ್ದಾನೆ ಎಂದರೆ ಸಾಕ್ಷಿ ಇಡೀ ಕುಟುಂಬವೇ ವಾಸವಾಗಿದೆ ಎಂದು ಸ್ವ ಇಚ್ಛೆಯಿಂದ ಹೇಳುತ್ತಾರೆ. 1 ನೇ ಪ್ರತಿವಾದಿ

ಮತ್ತು ಆತನ ಹೆಂಡತಿ ಮಕ್ಕಳು ಮಾತ್ರ ವಾಸವಾಗಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರದವರು 1 ನೇ ಪ್ರತಿವಾದಿಗೆ ಕೊಟ್ಟ ನಿವೇಶನವನ್ನು ಈ ವರೆಗೂ ಪಾಲು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಕೆಂಚಪ್ಪನಿಗೆ ಕೊಟ್ಟ ನಿವೇಶನದ ಬಗ್ಗೆ ಪಾಲು ವಿಭಾಗದ ಬಗ್ಗೆ ಬರಿಸಿರುವುದಿಲ್ಲ. 1 ಎಕರೆ 31 ಗುಂಟಾ ಜಮೀನನ್ನು ಮಾರಾಟ ಮಾಡಿದ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ಯಾವ ವರ್ಷ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ.

ಮುರಿಗೆಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡ ನಂತರ ಮುರಿಗೆಪ್ಪನೇ ಕುಟುಂಬದ ಮೇಲ್ವಿಚಾರಣೆ ಮಾಡುತ್ತಿದ್ದ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಯೇ ಮಾಡುತ್ತಿದ್ದ, ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1982 ರಲ್ಲಿಯೇ 1 ನೇ ಪ್ರತಿವಾದಿ ಅವರ ಕುಟುಂಬದಿಂದ ಬೇರೆ ಹೋಗಿ ಪ್ರತ್ಯೇಕವಾಗಿ ವಾಸವಾಗಿದ್ದ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ಮನೆಯಿಂದ ಹೊರ ಹೋಗಿ ಕೂಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಒಟ್ಟು ಕುಟುಂಬದಲ್ಲಿದ್ದು ಕೂಲಿ ಕೆಲಸ ಮಾಡುತ್ತಿದ್ದ ಎಂದು ಸ್ವ ಇಚ್ಛೆಯಿಂದ ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಯಿಸಿದ ಸಂಗತಿಗಳು ಸುಳ್ಳು ಇರುತ್ತವೆ ಎನ್ನುವುದು ಸರಿಯಲ್ಲ. ನಾನು ಮತ್ತು ವಾದಿ ನಿ.ಪಿ-33 ರಿಂದ 42 ಭಾವ ಚಿತ್ರಗಳನ್ನು ಈ ದಾವಗೋಸ್ಕರ ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಈ ದಾವೆಯ ಬಗ್ಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.